ಕಡೆ ಸ್ಪಂದನವಾಗುತ್ತಿದೆ. ಇಲ್ಲಿಗೆ ಬಂದಿರೋಳು ನನ್ನ ತಂಗಿ. ನನ್ನ ತಾಯಿ ಸಹ ಬರುತ್ತಾಳಂತೆ! ಅವಳು ನೋಡಲು ನನ್ನಂತೆ ಇದ್ದಾಳೆ.

ಊಟ ಮುಗಿಯಿತು. ಸುರೇಂದ್ರ ಮೆಲ್ಲಗೆ `ಕಾವ್ಯ... ಅವರು ಎಷ್ಟೇ ಒತ್ತಾಯ ಮಾಡಿದರೂ ಸಹ ಈ ದನದ ಕೊಟ್ಟಿಗೆಯಲ್ಲಿ ಉಳಿಯೋದು ಬೇಡ' ಎಂದಾಗ ಅವಳು ತಲೆಯಾಡಿಸಿದಳು.

ರುದ್ರನಾಗ ಅವಳನ್ನು ಇದರ ಬಗ್ಗೆ ಒತ್ತಾಯ ಮಾಡಲೇ ಇಲ್ಲ. ದಂಪತಿ ಹೊರಬಂದರು.

ಕಾವ್ಯ `ಮಾವ... ಅಮ್ಮನನ್ನು ಕರೆದುಕೊಂಡು ಬರುತ್ತೇನೆ.'

`ತುಂಬಾ ಸಂತೋಷ...'

ಅವರಿಬ್ಬರು ಹೋಗುತ್ತಿದ್ದಾರೆ. ರುದ್ರನಾಗ ಕಾವ್ಯ ನಿಂತಿದ್ದ ಜಾಗದಿಂದ ಹಿಡಿ ಮಣ್ಣನ್ನು ತೆಗೆದು ಮಲ್ಲಿಗೆಗೆ ನೀಡುತ್ತಾ `ಇವತ್ತು ರಾತ್ರಿಯೇ ಕೆಲಸ ಮುಗಿಯಬೇಕು!'

ಮಲ್ಲಿಗೆ ತಲೆಯಾಡಿಸಿದಳು. ಆದರೆ ಅದೇಕೋ ಮೊದಲಿನಂತೆ ಇರಲು ಅವಳಿಂದ ಆಗುತ್ತಿಲ್ಲ. ಮನದಲ್ಲಿ ತುಮುಲ ನಡೆಯುತ್ತಿದೆ. ಆದರೂ ಸಹ ಅವಳು ಆಜ್ಞೆಯನ್ನು ಮೀರಲಾರಳು.

ರುದ್ರನಾಗ ಮೆಲ್ಲಗೆ `ಅವಳ ಮೇಲೆ ನಾಗಬಂಧನ ಪ್ರಯೋಗಿಸು.'

ಮಲ್ಲಿಗೆ ಒಪ್ಪಿಕೊಂಡಳು.

***

## ಅರುಂಧತಿಯ ಆತುರ

ಕಾರು ಕೆಟ್ಟು ನಿಂತಿದ್ದರಿಂದ ತುಂಬಾ ತೊಂದರೆಯೇ ಆಯಿತು. ಅರುಂಧತಿಗೆ ಡ್ರೈವಿಂಗ್ ಗೊತ್ತಿತ್ತೇ ವಿನಃ ರಿಪೇರಿ ಕೆಲಸ ತಿಳಿದಿರಲಿಲ್ಲ. ಅವರಿಬ್ಬರೂ ಕಾರಿನಿಂದ ಇಳಿದು ಬಾನೆಟ್ ಅನ್ನು ತೆಗೆದು ಕೈಕಟ್ಟಿಕೊಂಡು ನಿಂತಿದ್ದರು.

ಸೋಲಿಗಪುರದ ರಸ್ತೆಯಲ್ಲಿ ಹೆಚ್ಚು ವಾಹನಗಳು ತಿರುಗುತ್ತಿರಲಿಲ್ಲ. ಸುಮಾರು ಎರಡು ಗಂಟೆಗಳ ಅವಧಿಯ ನಂತರ ಲಾರಿಯೊಂದು ಬಂದಿತು. ಅರ್ಧ ಗಂಟೆಯ ರಿಪೇರಿ ಕೆಲಸ. ಅಂತೂಇಂತೂ ಹೊರಟಿದ್ದರು.

ಏನಿದು... ನಿದ್ದೆ ಆಯಾಸ. ಅರುಂಧತಿಗೆ ತನ್ನ ಗಂಡ ಮತ್ತು ಮೊದಲ ಮಗಳನ್ನು ನೋಡುವ ಆತುರ. ಆದರೆ ದಾರಿ ಬೇಗ ಸಾಗುತ್ತಿಲ್ಲ. ಕಡಿದಾದ ತಿರುವುಗಳ ರಸ್ತೆಯಲ್ಲಿ ಇವಳಿಗೆ ಡ್ರೈವಿಂಗ್ ತುಂಬಾ ತ್ರಾಸದಾಯಕ ಎಂದು ಅನಿಸುತ್ತಿದೆ.

ಸೋಲಿಗಪುರವನ್ನು ತಲುಪಿದಾಗ ಎಂಟು ಗಂಟೆಯಾಗಿತ್ತು. ಕಾರನ್ನು ಮನೆಯ ಗೇಟಿನ ಮುಂದೆ ನಿಲ್ಲಿಸಿ ಆತುರದಿಂದ ಇಳಿದಳು. ಮದಂತ ಕುಳಿತೇ ಇದ್ದ. ನಂತರ 'ನೀವು ಹೋಗಿ ಬನ್ನಿ. ನಾನು ಬರಲಾರೆ.' ಅರುಂಧತಿ ಕಾರಿನಿಂದ ಇಳಿದಳು. ಆತುರದಿಂದ ಮನೆಯತ್ತ ನಡೆದಳು.

ನಿರಾಸೆ... ತೀವ್ರ ನಿರಾಸೆ. ಮನೆಗೆ ಬೀಗ ಹಾಕಲಾಗಿತ್ತು. ಒಳಗೆ ದೀಪ ಸಹ ಉರಿಯುತ್ತಿರಲಿಲ್ಲ. ಅರುಂಧತಿ ಅಸಹನೆಯಿಂದ ಚಡಪಡಿಸುತ್ತಿದ್ದಾಳೆ. ಮದಂತ ಇಳಿದು ಬಂದ. ಅವನೂ ಸಹ ಮನೆಯ ಬೀಗ ಕಂಡ. ನಂತರ 'ಈಗ ಏನು ಮಾಡುತ್ತೀರಾ?'

'ಅಣ್ಣಯ್ಯ ಎಲ್ಲಿಗೋ ಹೋಗಿರಬಹುದು. ಸ್ವಲ್ಪ ಹೊತ್ತು ಕಾಯೋಣ.'

ಮದಂತ ತಲೆಯಾಡಿಸಿದ. ರುದ್ರನಾಗ ಮತ್ತು ಮಲ್ಲಿಗೆ ಇಬ್ಬರೂ ಸಹ ಮನೆಯಲ್ಲಿ ಇಲ್ಲ ಎಂದರೆ ಅನುಮಾನ ಬರುತ್ತಿದೆ. ಮಲ್ಲಿಗೆ ಮನೆಯಲ್ಲಿ ಇಲ್ಲಾ ಎಂದರೆ ಸ್ಮಶಾನದಲ್ಲಿ ಇರುತ್ತಾಳೆ. ಬೇರೆ ಎಲ್ಲಿಗೂ ಸಹ ಅವಳನ್ನು ರುದ್ರನಾಗ ಕಳಿಸುವುದಿಲ್ಲ. ಅವರಿಬ್ಬರೂ ಕಾಯುತ್ತಿದ್ದಾರೆ. ರಾತ್ರಿ ಹತ್ತು ಗಂಟೆ. ಅಂದರೆ ಸುಮಾರು ಎರಡು ಗಂಟೆಗಳಷ್ಟು ಆ ಮನೆಯ ಹತ್ತಿರ ಕಾದಿದ್ದಾರೆ. ವಿಪರೀತ ಹಸಿವು... ಸುಸ್ತು. ಮದಂತ ಅವಳನ್ನು ಬಲವಂತವಾಗಿ ಹೊರಡಿಸಿಕೊಂಡು ಹೊರಟ. ಅವರಿಬ್ಬರು ಊರನ್ನು ಪ್ರವೇಶಿಸಿದರು.

ರುದ್ರನಾಗ ಅಲ್ಲೇ ನಿಂತಿದ್ದ. ಅವರಿಬ್ಬರನ್ನೂ ಕಂಡಿದ್ದ. ತಂಗಿಯನ್ನು ಕಂಡಿದ್ದರೂ ಸಹ ಹತ್ತಿರ ಬಂದು ಅವಳನ್ನು ಮಾತಾಡಿಸಿರಲಿಲ್ಲ. ತನ್ನ ಮುಖ ಕಂಡ ಕೂಡಲೇ ಅತ್ತು ರಂಪ ಮಾಡುತ್ತಾಳೆ ಎಂದು ರುದ್ರನಾಗನಿಗೆ ಗೊತ್ತಿತ್ತು. ಗಂಡ ಮತ್ತು ಮಗಳ ಬಗ್ಗೆ ತಿಳಿಯದೆ ಅರುಂಧತಿ ಇಲ್ಲಿಂದ ಹೋಗಲಾರಳು ಎಂಬುದು ರುದ್ರನಾಗನ ಲೆಕ್ಕಾಚಾರ.

* * *

## ನಾಗಬಂಧನ!

ಇದೊಂದು ಭಯಾನಕ ಪ್ರಯೋಗ. ತಂತ್ರ ಮತ್ತು ವಶೀಕರಣ ಎಂಬ ಪುಸ್ತಕದಲ್ಲಿ ಈ ಪ್ರಯೋಗದ ಬಗ್ಗೆ ವಿವರವಾಗಿ ತಿಳಿಸಿದ್ದಾರೆ. ಈ ಪ್ರಯೋಗವನ್ನು ಸಾಮಾನ್ಯವಾಗಿ ಮಾಂತ್ರಿಕರು ಮಾಡುವುದಿಲ್ಲ. ಏಕೆಂದರೆ ಇದನ್ನು ಸುಲಭವಾಗಿ ಎದುರಿಸಿರಬಹುದು. ಗರುಡ ಬಂಧನದ ಬಗ್ಗೆ ಗೊತ್ತಿದ್ದರೆ ಸಾಕು. ಇದು ಗೊತ್ತಿದ್ದರೂ ಸಹ ರುದ್ರನಾಗ ಇದನ್ನೇ ಪ್ರಯೋಗಿಸಲು ಯಾಕೆ ಹೇಳಿದ್ದನೋ ಗೊತ್ತಿಲ್ಲ. ಬಹುಶಃ ನಾಗಬಂಧನಕ್ಕೆ ವಿರುದ್ಧವಾಗಿ ಗರುಡ ಬಂಧನ ಪ್ರಯೋಗಿಸುವಂಥ ಮಾಂತ್ರಿಕರು ಯಾರೂ ಇಲ್ಲ ಅಂತ ತಿಳಿದುಕೊಂಡಿದ್ದ.

ರುದ್ರನಾಗನಿಗೆ ಅನುಮಾನ ಬಂದಿದ್ದು ಈ ಮದಂತನನ್ನು ತಂಗಿಯ ಜೊತೆ ಕಂಡ ನಂತರ. ಇವನ್ಯಾಕೆ ಅವಳ ಜೊತೆ ಇದ್ದಾನೆ. ಇಲ್ಲ... ಇಲ್ಲ ಉದಾಸೀನ ಮಾಡುವಂತೆ ಇಲ್ಲ. ಯಾಕೆ ಅಂದರೆ ಮದಂತ ಸಾಮಾನ್ಯನಲ್ಲ. ರುದ್ರನಾಗನಿಂದ ಸಕಲ ಮಾಂತ್ರಿಕ ಪ್ರಯೋಗಗಳನ್ನು ಕಲಿತಿರುವ ಪ್ರಚಂಡ ಅವನೇನಾದರೂ ಅರುಂಧತಿಯ ಪರವಾಗಿ ನಿಂತರೆ ಸಮಸ್ಯೆ ಎದುರಾಗುತ್ತದೆ. ರುದ್ರನಾಗ ಈಗ ತನ್ನ ನಿರ್ಧಾರವನ್ನು ಬದಲಿಸಿ ಸ್ಮಶಾನಕ್ಕೆ ಬಂದ. ನಾಗಬಂಧನದ ಬದಲಿಗೆ ಬೇರೊಂದು ಕ್ರೂರ ರೀತಿಯ ಪ್ರಯೋಗ ಮಾಡಲು ತಿಳಿಸಿದ. ಅದಕ್ಕೆ ಅಗತ್ಯವಾದ ವಸ್ತುಗಳನ್ನು ರುದ್ರನಾಗನೇ ಮಲ್ಲಿಗೆಗೆ ತಂದುಕೊಟ್ಟ.

ಮಲ್ಲಿಗೆ ಪ್ರಯೋಗದ ಮೊದಲ ಹಂತವನ್ನು ಪ್ರಾರಂಭಿಸಿದಳು. ಹಸ್ತ ಚಂಡಿಕೆ ಪ್ರಯೋಗ. ಯಮನ ಮಂತ್ರದೊಂದಿಗೆ ರುಂಕಾರ (ರುರು) ವನ್ನು ಜೊತೆಗೂಡಿಸಿ ವಿರೋಧ ರೀತಿಯಲ್ಲಿ ಹೇಳುತ್ತಾರೆ.

ಅಪಸವ್ಯ ರೀತಿಯ ಅನುಷ್ಠಾನ ಮಾಡಿದಳು. ಅಗ್ನಿಕುಂಡ ಉರಿಯುತ್ತಿದೆ. ಮಲ್ಲಿಗೆ ಒಂಟಿ ಕಾಲಿನಲ್ಲಿ ನಿಂತು ಎರಡು ಕೈಗಳನ್ನು ಮೇಲೆತ್ತಿ ಮಂತ್ರ ಹೇಳುತ್ತಿದ್ದಾಳೆ. ಆಳವಾಗಿ ಅಕ್ಷರಗಳನ್ನು ವಿರೋಧ ಕ್ರಮದಲ್ಲಿ ಜೋಡಿಸಿ ಹೇಳುತ್ತಿದ್ದಾಳೆ.

ಅಬ್ಬ... ಸ್ವರ ಉನ್ಮಾದದ ಪರಾಕಾಷ್ಠೆಯನ್ನು ತಲುಪಿದೆ. ಮಲ್ಲಿಗೆ ನಡುಗುತ್ತಿದ್ದಾಳೆ. ಈ ಪ್ರಯೋಗವೇ ತುಂಬಾ ಕಠಿಣ. ಹದಿನೈದು ಸಾಲುಗಳ ಮಂತ್ರ ದಂಡ. ಅಂಥ ನೂರೆಂಟು ದಂಡವನ್ನು ಏರಿಕೆಯ ಸ್ವರದಲ್ಲಿ ಹೇಳಬೇಕು. ಮಧ್ಯೆ ಮಂತ್ರ ನಿಲ್ಲಬಾರದು. ಸ್ವರ ತಗ್ಗಿಸಬಾರದು. ಮನಸ್ಸು ಚಂಚಲಗೊಳ್ಳಬಾರದು. ವರ್ಣಗಳ... ಸ್ವರಗಳ ವ್ಯತ್ಯಾಸ ಆಗಬಾರದು. ಇದು ತುಂಬಾ ಶ್ರಮದಾಯಕ ಪ್ರಯೋಗ. ದೇಹ ನಡುಗುತ್ತಿದೆ. ಆಕಾಶದತ್ತ ಮುಖ ಮಾಡಿದ್ದಾಳೆ. ಅವಳ ಕತ್ತಿನಲ್ಲಿರುವ ತಲೆಬುರುಡೆಗಳ ಹಾರ ದೇಹದ ಕಂಪನದಿಂದ ಅತ್ತಿತ್ತ ತೂಗಾಡುತ್ತಿದೆ.

ಗೊಂಬೆಯತ್ತ ನೋಡಿದಳು. ಕಾವ್ಯ ಹೆಜ್ಜೆ ಊರಿದ್ದ ಮಣ್ಣಿನಿಂದ ಮಾಡಿರುವ ಗೊಂಬೆ. ಅವಳ ತಂಗಿ ಕಾವ್ಯ! ಇದು ಭ್ರಮೆ. ಗೊಂಬೆಯ ಬದಲಿಗೆ ಅಲ್ಲಿ ತಂಗಿ ಕಾವ್ಯ ಕುಳಿತ ರೀತಿ ಅವಳಿಗೆ ಕಂಡಿತು. ಬೆಚ್ಚಿಬಿದ್ದಳು ಮಲ್ಲಿಗೆ.

ರಕ್ತ ಸಂಬಂಧದ ಭಾವುಕತೆಯಿಂದ ಚಂಚಲಗೊಳ್ಳುತ್ತಿರುವ ಮನಸ್ಸನ್ನು ನಿಗ್ರಹಿಸಿದಳು. ಕೋಳಿಯ ಕತ್ತುಗಳನ್ನು ಬಲಿ ಕತ್ತಿಯಿಂದ ಕತ್ತರಿಸಿ ಎಸೆದಳು. ರಕ್ತ ಹನಿಯುತ್ತಿದೆ. ರಕ್ತತರ್ಪಣದ ಕೊನೆಯ ಅಂಕ. ಸ್ಮಶಾನ ಕಂಪಿಸಿತು. ಸಿಡಿಯಿತು ಸಮಾಧಿಯೊಂದು. ಹೊರ ಬಂದ ಜ್ವಾಲೆ ಗಿರಗಿರನೆ ತಿರುಗುತ್ತಿದೆ. ಪೊರಕೆಯ ಆಕಾರದ ಜ್ವಾಲೆ.

ಮಲ್ಲಿಗೆ ಈಗ ಉದ್ದೀಪನೆಯ ಮಂತ್ರವನ್ನು ತ್ರಿಮಯ ಸ್ವರದಲ್ಲಿ ಪ್ರಾರಂಭಿಸಿದಳು. ಜ್ವಾಲೆ ಗಿರಗಿರನೆ ತಿರುಗುತ್ತಾ ಈಗ ಮಂಡಳದ ಕಡೆ ನುಗ್ಗಿತು. ಎರಡು ಕೈಗಳನ್ನು ಗೊಂಬೆಯ ಕಡೆ ತೋರಿಸುತ್ತಾ ಕೊನೆಯ ಚರಣ ಮುಗಿಸಿದಳು. ಜ್ವಾಲೆ ಗೊಂಬೆಯೊಳಗೆ ಸೇರಿತು. ಗೊಂಬೆ ಅಲುಗಾಡುತ್ತಿದೆ. ಮಲ್ಲಿಗೆ ಈಗ ನೆಲದ ಮೇಲೆ ಕುಳಿತುಕೊಂಡು ಗೊಂಬೆಯನ್ನು ಅಂಗೈ ಮೇಲೆ ಇರಿಸಿಕೊಂಡಳು. ಮೊದಲೇ ತಂದು ಇರಿಸಿಕೊಂಡಿದ್ದ ದಬ್ಬಳವನ್ನು ಎತ್ತಿಕೊಂಡು ರಕ್ತದಲ್ಲಿ ಅದ್ದಿದಳು. ಗೊಂಬೆಯ ಎದೆಗೆ ಚುಚ್ಚಿದಳು. ಇದೇ ಹಸ್ತ ಚಂಡಿಕೆ ಪ್ರಯೋಗ.

## ಚಡಪಡಿಸುತ್ತಿರುವ ಕಾವ್ಯ

ಅದೇ ಊರಿನ ಇನ್ಯಾವುದೋ ಜಾಗದಲ್ಲಿದ್ದ ಕಾವ್ಯ ಯಮಯಾತನೆ ತಡೆಯಲಾರದೆ ಕಿರುಚಿದ್ದಳು. ನೋವು... ಅಸಾಧ್ಯ ನೋವು! ಅದು ಕಾಡಿನ ರಸ್ತೆ. ಮರವೊಂದರ ಕೆಳಗೆ ಕಾರು ನಿಂತಿದೆ. ಮುಂದಿನ ಸೀಟಿನಲ್ಲಿ ಅವರಿಬ್ಬರು ಕುಳಿತಿದ್ದಾರೆ.

ಸುರೇಂದ್ರ... ಕಾವ್ಯ!

ಸುರೇಂದ್ರ ಅವಳ ತುಟಿಗಳನ್ನು ಚುಂಬಿಸುತ್ತಾ 'ಕಾವ್ಯ... ಕಾರಿನಲ್ಲಿ ಬೇಡ ಹೊರಗೆ ಹುಲ್ಲಿನ ಮೇಲೆ...' ಯಾಕೆ ಅಂತ ಗೊತ್ತಿಲ್ಲ. ಕಾವ್ಯಳಲ್ಲಿ ಈಗ ಮೊದಲಿನ ಉತ್ಸಾಹ ಕಂಡು ಬರುತ್ತಿಲ್ಲ. ಏನೋ